ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂ. DTE-ADMI0ACM2/ 17 /2023

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ:08-05-2023.

## -:: ಪ್ರವೇಶಾಧಿಸೂಚನೆ ::-

**ವಿಷಯ:** 2023-24ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿನ ಅನುದಾನಿತ ಕೋರ್ಸುಗಳಿಗೆ ಪ್ರಥಮ ಸೆಮಿಸ್ಟರ್ ಇಂಜಿನಿಯರಿಂಗ್ ಹಾಗೂ ನಾನ್-ಇಂಜಿನಿಯರಿಂಗ್ ಡಿಪ್ಲೋಮಾ ಕೋರ್ಸುಗಳ ಪ್ರವೇಶಾತಿಗಾಗಿ ಅರ್ಜಿ ಆಹ್ವಾನಿಸಿ, ಸೀಟು ಹಂಚಿಕೆ ಮಾಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಪತ್ರ ಸಂ. ಇಡಿ ಡಿಟಿಇ 2023, ದಿ:
2. ಸರ್ಕಾರದ ಅಧಿಸೂಚನೆ ಸಂ. ಎಸ್‌ಡಬ್ಲ್ಯುಡಿ 225 ಬಿಸಿಎ 2000, ದಿ:30-03-2002 (ಮೀಸಲಾತಿಗೆ ಸಂಬಂಧಿಸಿದಂತೆ).
3. ಸರ್ಕಾರದ ಆದೇಶ ಸಂ: ಇಡಿ 106 ಟಿಪಿಇ 2005, ದಿನಾಂಕ: 06/05/2005 & ಇಡಿ/99/ಟಿಪಿಇ/2011, ದಿ:29-04-2011. (ಕನಿಷ್ಠ ವಿದ್ಯಾರ್ಹತೆಗೆ ಸಂಬಂಧಿಸಿದಂತೆ)
4. ಸರ್ಕಾರದ ಆದೇಶ ಸಂ. ಇಡಿ 64 ಟಿಪಿಇ 2016, ದಿ:21-06-2016 & ಸರ್ಕಾರದ ಪತ್ರ ಸಂ. ಇಡಿ 101 ಟಿಪಿಇ 2018, ದಿ:30-06-2018 & 29-07-2021 (ಶುಲ್ಕ ಪರಿಷ್ಕರಣೆಗೆ ಸಂಬಂಧಿಸಿದಂತೆ).
5. ಈ ಕಛೇರಿ ಸುತ್ತೋಲೆ ಪತ್ರ ಸಂ.DTE-ADMI0ACM2/8/2020, ದಿ:07-09-2020.

-********-

ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿನ (ಅನುದಾನಿತ ಕೋರ್ಸುಗಳು) ಪೂರ್ಣಾವಧಿಯ ಇಂಜಿನಿಯರಿಂಗ್ ಮತ್ತು ನಾನ್-ಇಂಜಿನಿಯರಿಂಗ್ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಕೋರ್ಸುಗಳಿಗೆ 2023-24ನೇ ಶೈಕ್ಷಣಿಕ ಸಾಲಿಗೆ ಕೆಳಕಂಡ ಎರಡು ವಿಧಾನಗಳಲ್ಲಿ ಪ್ರವೇಶಾತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

### 1. ಮೆರಿಟ್ ಆಧಾರಿತ ಆನ್‌ಲೈನ್ ಪ್ರವೇಶಾತಿ ಪ್ರಕ್ರಿಯೆ:

ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳ (ಅನುದಾನಿತ ಕೋರ್ಸುಗಳು) **ಕೋಷ್ಟಕ-1**ರ ಕಾಲಂ(4)ರಲ್ಲಿ ನಮೂದಿಸಿರುವ ಮೆರಿಟ್ ಆಧಾರಿತ ಕಾಲೇಜುವಾರು ಮತ್ತು ಕೋರ್ಸುಗಳಿಗೆ ಮಾತ್ರ ಪ್ರವೇಶ ಬಯಸುವ ಅಭ್ಯರ್ಥಿಗಳು ಕೋರ್ಸುಗಳ ಆಯ್ಕೆಗಳನ್ನು ಅವರ ಇಚ್ಛಾನುಸಾರ ಆದ್ಯತಾ ಪಟ್ಟಿಯಲ್ಲಿ (Priority Sheet) ನಮೂದಿಸಿ ಮೆರಿಟ್ ಆಧಾರಿತ ಎಲ್ಲಾ ಕಾಲೇಜುಗಳಿಗೆ ಒಂದೇ ಅರ್ಜಿಯನ್ನು ಸಮೀಪದ ಯಾವುದೇ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರಿಗೆ ಸಲ್ಲಿಸುವುದು. ಅಭ್ಯರ್ಥಿಗಳು ನೀಡಿರುವ ಆದ್ಯತೆ ಮತ್ತು ಮೆರಿಟ್ ಹಾಗೂ ರೋಷ್ಟರ್‌ಗನುಗುಣವಾಗಿ **ಆನ್‌ಲೈನ್** ಮೂಲಕ ಸೀಟು ಹಂಚಿಕೆ ಮಾಡಲಾಗುವುದು. ಮೆರಿಟ್ ಆಧಾರಿತ ಆನ್‌ಲೈನ್ ಪ್ರವೇಶಾತಿ ಪ್ರಕ್ರಿಯೆಯ ವಿವಿಧ ಹಂತಗಳ ತಾತ್ಕಾಲಿಕ ವೇಳಾಪಟ್ಟಿಯು ಈ ಕೆಳಕಂಡಂತಿದೆ.

| | | ಪ್ರಾರಂಭ ದಿನಾಂಕ | ಕೊನೆಯ ದಿನಾಂಕ |
|---|---|---|---|
| 01 | ಇಲಾಖೆಯ ಅಧಿಕೃತ ವೆಬ್‌ಸೈಟ್‌ಗಳಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿ ಮತ್ತು ಆದ್ಯತಾ ಪಟ್ಟಿಯನ್ನು ಸಮೀಪದ ಯಾವುದೇ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರಿಗೆ ನಿಗಧಿತ ದಿನಾಂಕದೊಳಗೆ ಸಲ್ಲಿಸಲು ಪ್ರಾರಂಭ ಮತ್ತು ಕೊನೆಯ ದಿನಾಂಕ: | 09-05-2023 ಬೆಳಿಗ್ಗೆ 10.00 ರಿಂದ | 18-05-2023 ಸಂಜೆ 5.30ರ ವರೆಗೆ |

| | | | |
|---|---|---|---|
| 02. | ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಮೆರಿಟ್ ಪಟ್ಟಿ ಪ್ರಕಟಣೆಯನ್ನು ಅಧೀಕೃತ ವೆಬ್‌ಸೈಟ್‌ಗಳ ಮೂಲಕ ಪ್ರಕಟಿಸುವ ದಿನಾಂಕ: (ಅಭ್ಯರ್ಥಿಗಳ ಮೊಬೈಲ್ ಸಂಖ್ಯೆಗೆ ಎಸ್.ಎಂ.ಎಸ್ ಮೂಲಕ ಮಾಹಿತಿಯನ್ನು ರವಾನಿಸಲಾಗುವುದು). | **18-05-2023 ಸಂಜೆ 6.00 ಗಂಟೆಯ ನಂತರ** | |
| 03 | ಮೆರಿಟ್ ಪಟ್ಟಿ ಆಕ್ಷೇಪಣೆಗೆ/ಪರಿಷ್ಕರಣೆ/ತಿದ್ದುಪಡಿ ಮಾಡಲು ಇಚ್ಚಿಸಿದಲ್ಲಿ ಅಭ್ಯರ್ಥಿಗಳು ಸಮೀಪದ ಯಾವುದೇ ಸರ್ಕಾರಿ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರಿಗೆ ಮನವಿ ಸಲ್ಲಿಸಲು ಅಂತಿಮ ದಿನಾಂಕ : | **19-05-2023 (ಬೆಳಿಗ್ಗೆ 10.00 ರಿಂದ ಸಂಜೆ 5.00 ರವರೆಗೆ)** | |
| 04 | ಅಂತಿಮ ಮೆರಿಟ್ ಪಟ್ಟಿ ಪ್ರಕಟಣೆಯ ದಿನಾಂಕ: | **19-05-2023 ಸಂಜೆ 5.00ರ ನಂತರ** | |
| 05 | ಸೀಟು ಹಂಚಿಕೆ ಪ್ರಕಟಣೆಯ ದಿನಾಂಕ: | **20-05-2023 ಸಂಜೆ 6.00 ಗಂಟೆಯ ನಂತರ** | |
| 06 | ಸೀಟು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ನಿಗಧಿತ ಶುಲ್ಕದೊಂದಿಗೆ ಸಂಬಂಧಪಟ್ಟ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಪ್ರಾರಂಭ ಮತ್ತು ಕೊನೆಯು ದಿನಾಂಕ: | **21-05-2023** | **23-05-2023.** |
| 07 | ಸೀಟು ಹಂಚಿಕೆಯಾದ ನಂತರ ಭರ್ತಿಯಾಗದ ಉಳಿಕೆ ಸೀಟುಗಳನ್ನು ಮೊದಲು ಬಂದವರಿಗೆ ಮೊದಲ ಆದ್ಯತೆಯ ಮೇಲೆ ಪ್ರಾಂಶುಪಾಲರ ಹಂತದಲ್ಲಿಯೇ ಆಫ್‌ಲೈನ್ ಮೂಲಕ ಸೀಟು ಹಂಚಿಕೆ ಮಾಡಲು ಪ್ರಾರಂಭ & ಅಂತಿಮ ದಿನಾಂಕ: | **24-05-2023** | **31-05-2023** |

❖ ವಿಶೇಷ ಗುಂಪಿನಡಿ ಬರುವ ಸ್ಪೋರ್ಟ್ಸ್, ಎನ್.ಸಿ.ಸಿ ಮತ್ತು ಸ್ಕೌಟ್ಸ್&ಗೈಡ್ಸ್, ಸೈನಿಕ & ಮಾಜಿ-ಸೈನಿಕ, ಬಾಲಾಪರಾಧಿ ಕೋಟಾ, ಹೊರನಾಡು ಕನ್ನಡಿಗ / ಹೊರನಾಡು ಕನ್ನಡಿಗ ಕೋಟಾದ, ಐ.ಟಿ.ಐ, ಜೆ.ಓ.ಸಿ, ಜೆ.ಎಲ್.ಸಿ ಕೋಟಾದ ಮತ್ತು ವಿಶೇಷಚೇತನರ ಕೋಟಾ ಪ್ರವರ್ಗಗಳಿಗೆ ಸ್ಥಾನಗಳನ್ನು ಮೀಸಲಿಸಿರುವ ಸಂಸ್ಥೆಗಳ ಪ್ರಾಂಶುಪಾಲರುಗಳು ಇಲಾಖೆಯ ತಂತ್ರಾಂಶದಲ್ಲಿ **ದಿನಾಂಕ:20-05-2023ರ ಸಂಜೆ 5.00 ರ ಒಳಗೆ** ವಿವರಗಳನ್ನು ಕಡ್ಡಾಯವಾಗಿ ತಪ್ಪದೇ ನಮೂದಿಸುವುದು. ಈ ರೀತಿ ನಮೂದಿಸಿದ ವಿದ್ಯಾರ್ಥಿಗಳಿಗೆ ಎಲ್ಲಾ ವರ್ಗದ ವಿದ್ಯಾರ್ಥಿಗಳ ಜೊತೆಗೆ ಸೀಟು ಹಂಚಿಕೆ ಮಾಡಲಾಗುವುದು.

## ಕೋಷ್ಟಕ-1

**ಮೆರಿಟ್ ಆಧಾರಿತ ಮತ್ತು ಮೊದಲು ಬಂದವರಿಗೆ ಮೊದಲ ಆದ್ಯತೆಯ ಪ್ರವೇಶಾತಿ ನೀಡುವ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪಾಲಿಟೆಕ್ನಿಕ್‌ಗಳು**

| ಕ್ರಸಂ. | ಕೋಡ್ | ಪಾಲಿಟೆಕ್ನಿಕ್ ಹೆಸರು | ಮೆರಿಟ್ ಆಧಾರಿತ ಕೋರ್ಸ್‌ಗಳು | ಮೊದಲು ಬಂದವರಿಗೆ ಮೊದಲ ಆದ್ಯತೆಯ ಕೋರ್ಸ್‌ಗಳು |
|---|---|---|---|---|
| (1) | (2) | (3) | (4) | (5) |
| 1. | 102 | ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು | CS, CE, EC, EE, ME | AT, CH, CR, EN,HT, MC, MI, MZ, WS |
| 2. | 103 | ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್, ಮಂಗಳೂರು | AT, CS, CE, EC, EE, ME, CH | PO |
| 3. | 104 | ಸರ್ಕಾರಿ ಪಾಲಿಟೆಕ್ನಿಕ್, ಬಳ್ಳಾರಿ | AT, CS, CE, EC, EE, ME, MT | -- |
| 4. | 105 | ಶ್ರೀಮತಿ ಎಲ್.ವಿ ಸರ್ಕಾರಿ ಪಾಲಿಟೆಕ್ನಿಕ್, ಹಾಸನ | CS, CE, EE, ME | AT, MY |
| 5. | 106 | ಡಿ.ಆರ್.ಆರ್. ಸರ್ಕಾರಿ ಪಾಲಿಟೆಕ್ನಿಕ್, ದಾವಣಗೆರೆ | CS, CE, EC, EE, ME, CK, CP | --- |

| (1) | (2) | (3) | (4) | (5) |
|---|---|---|---|---|
| 6. | 107 | ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ | AT, CS, CE, EC, EE, ME | CK, CP |
| 7. | 108 | ಸಿ.ಪಿ.ಸಿ ಸರ್ಕಾರಿ ಪಾಲಿಟೆಕ್ನಿಕ್, ಮೈಸೂರು | CE, CS, EC, EE, ME, MY | CK, CP, AT, |
| 8. | 109 | ಸರ್ಕಾರಿ ಪಾಲಿಟೆಕ್ನಿಕ್, ಕಲಬುರ್ಗಿ | CE, CS, EC, EE, ME, IS | -- |
| 9. | 111 | ಸರ್ಕಾರಿ ಪಾಲಿಟೆಕ್ನಿಕ್, ಚನ್ನಪಟ್ಟಣ | CE, CS, EC, EE, ME | AT |
| 10. | 112 | ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು | AT, CE, CS, EC, EE, ME | -- |
| 11. | 113 | ಸರ್ಕಾರಿ ಪಾಲಿಟೆಕ್ನಿಕ್, ಬೆಳಗಾವಿ | AT, CE, CK, CP, EC, EE, ME | -- |
| 12. | 115 | ಸರ್ಕಾರಿ ಪಾಲಿಟೆಕ್ನಿಕ್, ಬೀದರ್ | CS, EE, ME | AT, CE, CK, CP, EC, |
| 13. | 116 | ಸರ್ಕಾರಿ ಪಾಲಿಟೆಕ್ನಿಕ್, ಕೆ.ಆರ್.ಪೇಟೆ | CE, CS, EC, EE, ME | -- |
| 14. | 117 | ಸರ್ಕಾರಿ ಪಾಲಿಟೆಕ್ನಿಕ್, ರಾಯಚೂರು | CE, CS, EE, ME | EC |
| 15. | 119 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು | CS, EC | CE, CK, CP, FT, LI, GA |
| 16. | 128 | ವಿ.ಐ.ಎಸ್.ಎಸ್.ಜೆ ಸರ್ಕಾರಿ ಪಾಲಿಟೆಕ್ನಿಕ್, ಭದ್ರಾವತಿ | CE, EE, ME, MT | -- |
| 17. | 130 | ಸರ್ಕಾರಿ ಪಾಲಿಟೆಕ್ನಿಕ್, ಚಾಮರಾಜನಗರ | CE, CS, EC, ME, MY | |
| 18. | 149 | ಸರ್ಕಾರಿ ಪಾಲಿಟೆಕ್ನಿಕ್, ಚಿತ್ರದುರ್ಗ. | CE, CS, EC, ME | -- |
| 19. | 155 | ಸರ್ಕಾರಿ ಪಾಲಿಟೆಕ್ನಿಕ್, ತುರುವೆಕೆರೆ. | CE, CS, EC, ME | -- |
| 20. | 157 | ಸರ್ಕಾರಿ ಪಾಲಿಟೆಕ್ನಿಕ್, ಅರಕೆರೆ–ಶ್ರೀರಂಗಪಟ್ಟಣ. | CE,CS, ME, EC, EV, AY | -- |
| 21. | 163 | ಸರ್ಕಾರಿ ಪಾಲಿಟೆಕ್ನಿಕ್, ಬಂಟ್ವಾಳ. | CE, CS, EC, ME | -- |
| 22. | 171 | ಸರ್ಕಾರಿ ಪಾಲಿಟೆಕ್ನಿಕ್, ಹುಬ್ಬಳ್ಳಿ. | CE, CS, EC, ME | -- |
| 23. | 170 | ಸರ್ಕಾರಿ ಪಾಲಿಟೆಕ್ನಿಕ್, ಹರಿಹರ | CE, CS, EC, ME | -- |
| 24. | 187 | ಸರ್ಕಾರಿ ಪಾಲಿಟೆಕ್ನಿಕ್, ಶಿರಾ | CE, EE, FP, ME | -- |
| 25. | 200 | ಸರ್ಕಾರಿ ಪಾಲಿಟೆಕ್ನಿಕ್, ಮಳವಳ್ಳಿ, ಮಂಡ್ಯ ಜಿಲ್ಲೆ | EC, CS | -- |
| 26. | 710 | ಸರ್ಕಾರಿ ಪಾಲಿಟೆಕ್ನಿಕ್, ಬಸವಾಪಟ್ಟಣ, ದಾವಣಗೆರೆ ಜಿಲ್ಲೆ | CS, EC | -- |

| ಖಾಸಗಿ ಅನುದಾನಿತ ಪಾಲಿಟೆಕ್ನಿಕ್‌ಗಳು | | | | |
|---|---|---|---|---|
| (1) | (2) | (3) | (4) | (5) |
| 27. | 204 | ಎಂ.ಇ.ಐ ಪಾಲಿಟೆಕ್ನಿಕ್, ರಾಜಾಜಿನಗರ, ಬೆಂಗಳೂರು (ಖಾಸಗಿ ಅನುದಾನಿತ) | CE, CS, EC, EE, EI, ME | -- |
| 28. | 307 | ಕೆ.ಸಿ.ಟಿ ಪಾಲಿಟೆಕ್ನಿಕ್, ಕಲಬುರ್ಗಿ (ಖಾಸಗಿ ಅನುದಾನಿತ) | CE,EC, EE, ME | -- |
| 29. | 202 | ಕೆ.ಹೆಚ್.ಕಬ್ಬೂರ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಧಾರವಾಡ (ಖಾಸಗಿ ಅನುದಾನಿತ) | CS, ME, EE, EC(30 Seats Only) | CS, CP, CK, AT, EC, MC |

**2. ಮೊದಲು ಬಂದವರಿಗೆ ಮೊದಲ ಆದ್ಯತೆ ಪ್ರವೇಶಾತಿ ಪ್ರಕ್ರಿಯೆ:**

ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳ (ಅನುದಾನಿತ ಕೋರ್ಸುಗಳು) ಕೋಷ್ಟಕ (1) & (2)ರ ಕಾಲಂ(5)ರಲ್ಲಿ ನಮೂದಿಸಿರುವ ಕೋರ್ಸುಗಳಿಗೆ ಪ್ರವೇಶ ಪ್ರಕ್ರಿಯೆಯನ್ನು ಮೊದಲು ಬಂದವರಿಗೆ ಮೊದಲ ಆದ್ಯತೆಯ ಮೇರೆಗೆ ಅರ್ಹ ಅಭ್ಯರ್ಥಿಗಳಿಗೆ ಸಂಸ್ಥೆಯ ಪ್ರಾಂಶುಪಾಲರ ಹಂತದಲ್ಲಿ ಸ್ಥಳದಲ್ಲಿಯೇ (Spot Admission) ಪ್ರವೇಶವನ್ನು ನೀಡಲಾಗುವುದು. ಹೀಗಾಗಿ ಈ ಸಂಸ್ಥೆಗಳಲ್ಲಿ ಪ್ರವೇಶ ಬಯಸುವ ಅಭ್ಯರ್ಥಿಗಳು ಕೋರ್ಸುಗಳ ಆದ್ಯತಾ ಪಟ್ಟಿಯನ್ನು (Priority Sheet) ಅರ್ಜಿಯೊಂದಿಗೆ ಸಲ್ಲಿಸುವ ಅಗತ್ಯ ಇರುವುದಿಲ್ಲ.

| | | |
|---|---|---|
| ಇಲಾಖೆಯ ಅಧಿಕೃತ ವೆಬ್‌ಸೈಟ್‌ಗಳಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು, ಭರ್ತಿ ಮಾಡಿದ ಅರ್ಜಿಯನ್ನು ಪ್ರವೇಶ ಬಯಸುವ ಸಂಸ್ಥೆಯ ಪ್ರಾಂಶುಪಾಲರಿಗೆ ಸಲ್ಲಿಸಿ ತಕ್ಷಣವೇ ಪ್ರವೇಶ ಪಡೆಯಲು ಪ್ರಾರಂಭ ಮತ್ತು ಕೊನೆಯ ದಿನಾಂಕ:<br>ವಿ.ಸೂ:- ಅರ್ಜಿ ಸ್ವೀಕೃತಿಗೆ ನಿಗಧಿಪಡಿಸಿರುವ ಕೊನೆಯ ದಿನಾಂಕಕ್ಕೂ ಮೊದಲೇ ಎಲ್ಲಾ ಸೀಟುಗಳು ಭರ್ತಿಯಾದಲ್ಲಿ ಆ ನಂತರ ಯಾವುದೇ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. | 09-05-2023<br>ಬೆಳಿಗ್ಗೆ 10.00 ರಿಂದ | 31-05-2023<br>ಸಂಜೆ 5.30ರ ವರೆಗೆ |

**ಕೋಷ್ಟಕ-2**

**ಮೊದಲು ಬಂದವರಿಗೆ ಮೊದಲ ಆದ್ಯತೆಯ ಮೇಲೆ ಮಾತ್ರ ಪ್ರವೇಶಾತಿ ನೀಡುವ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪಾಲಿಟೆಕ್ನಿಕ್‌ಗಳು**

| ಕ್ರಸಂ. | ಕೋಡ್ | ಪಾಲಿಟೆಕ್ನಿಕ್ ಹೆಸರು | ಮೆರಿಟ್ ಆಧಾರಿತ ಕೋರ್ಸುಗಳು | ಮೊದಲು ಬಂದವರಿಗೆ ಮೊದಲ ಆದ್ಯತೆಯ ಕೋರ್ಸುಗಳು |
|---|---|---|---|---|
| (1) | (2) | (3) | (4) | (5) |
| 1. | 101 | ಸರ್ಕಾರಿ ಜವಳಿ ತಂತ್ರಜ್ಞಾನ ಸಂಸ್ಥೆ, ಕೆ.ಆರ್.ವೃತ್ತ, ಬೆಂಗಳೂರು | -- | TX |
| 2. | 110 | ಡಿ.ಎ.ಸಿ.ಜಿ ಸರ್ಕಾರಿ ಪಾಲಿಟೆಕ್ನಿಕ್, ಚಿಕ್ಕಮಗಳೂರು | -- | AT, CE, CS, EC, EE, ME |
| 3. | 114 | ಸರ್ಕಾರಿ ಪಾಲಿಟೆಕ್ನಿಕ್, ಕಾರವಾರ | -- | AT, CE, CK, CP, CS, EE, ME |
| 4. | 118 | ಸರ್ಕಾರಿ ಪಾಲಿಟೆಕ್ನಿಕ್, ಕುಶಾಲನಗರ | -- | AT, CE, EC, EE, ME |
| 5. | 120 | ಸರ್ಕಾರಿ ಪಾಲಿಟೆಕ್ನಿಕ್, ವಿಜಯಪುರ | -- | AT, CE, CS, EC, EE, ME |
| 6. | 121 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ | -- | CE, CK, CP, CS, EC, FT |
| 7. | 123 | ಸರ್ಕಾರಿ ಜಿ.ಆರ್. ಇನ್ಸ್‌ಟಿಟ್ಯೂಟ್ ಆಫ್ ಕಮರ್ಷಿಯಲ್ ಪ್ರಾಕ್ಟೀಸ್, ಬೆಂಗಳೂರು | -- | CK, CP |
| 8. | 124 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮಂಗಳೂರು | -- | CK, CP, CS, EC, LI |
| 9. | 126 | ಸರ್ಕಾರಿ ಮುದ್ರಣ ತಂತ್ರಜ್ಞಾನ ಸಂಸ್ಥೆ, ಬೆಂಗಳೂರು | -- | PT |
| 10. | 131 | ಸರ್ಕಾರಿ ಗಣಿ ಶಿಕ್ಷಣ ಶಾಲೆ, ಕೆ.ಜಿ.ಎಫ್ | -- | CS, ME, MN |
| 11. | 132 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹಾಸನ | -- | CK, CP, EC, FT, LI |
| 12. | 135 | ಸರ್ಕಾರಿ ಮಹಿಳಾ ವಸತಿ ಪಾಲಿಟೆಕ್ನಿಕ್, ಶಿವಮೊಗ್ಗ | -- | CK, CP, CS, EC, FT |
| 13. | 136 | ಸರ್ಕಾರಿ ಪಾಲಿಟೆಕ್ನಿಕ್, ಬಾಗೇಪಲ್ಲಿ | -- | AT, CS, EC, ME |
| 14. | 137 | ಸರ್ಕಾರಿ ಪಾಲಿಟೆಕ್ನಿಕ್, ಕೊಪ್ಪಳ. | -- | CS, EC, ME |
| 15. | 138 | ಸರ್ಕಾರಿ ಪಾಲಿಟೆಕ್ನಿಕ್, ಕುಷ್ಟಗಿ. | -- | CS, EC, ME |
| 16. | 139 | ಸರ್ಕಾರಿ ಪಾಲಿಟೆಕ್ನಿಕ್, ಸೊರಬ. | -- | AT, CE, CK, CP, CS, EC |

| (1) | (2) | (3) | (4) | (5) |
|---|---|---|---|---|
| 17. | 140 | ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ, ಹೆಸರಘಟ್ಟ, ಬೆಂಗಳೂರು. | -- | CI, SR |
| 18. | 141 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಲಬುರ್ಗಿ | -- | CP, CS, EC, IT |
| 19. | 142 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ರಾಮನಗರ | -- | CP, CK, CS, EC, GA, EV |
| 20. | 143 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಶಿರಾಳಕೊಪ್ಪ. | -- | CE, CS EC, ME, CT |
| 21. | 144 | ಸರ್ಕಾರಿ ಪಾಲಿಟೆಕ್ನಿಕ್, ಕಾರ್ಕಳ. | -- | CE, CS, EC, ME |
| 22. | 145 | ಸರ್ಕಾರಿ ಪಾಲಿಟೆಕ್ನಿಕ್, ಉಡುಪಿ. | -- | CE, CS, EC, ME |
| 23. | 146 | ಸರ್ಕಾರಿ ಪಾಲಿಟೆಕ್ನಿಕ್, ಲಿಂಗಸಗೂರು | -- | AT, CE, CS, EC, ME |
| 24. | 147 | ಸರ್ಕಾರಿ ಪಾಲಿಟೆಕ್ನಿಕ್, ಗದಗ. | -- | CE, CS, EC, ME |
| 25. | 148 | ಸರ್ಕಾರಿ ಪಾಲಿಟೆಕ್ನಿಕ್, ಗಜೇಂದ್ರಘಡ. | -- | AT, CE, CS, EC, ME |
| 26. | 150 | ಸರ್ಕಾರಿ ಪಾಲಿಟೆಕ್ನಿಕ್, ಹಾನಗಲ್. | -- | CE, CS, EC, ME |
| 27. | 151 | ಶ್ರೀಮತಿ ಎಸ್.ಆರ್. ನಿರಾಣಿ ಸರ್ಕಾರಿ ಪಾಲಿಟೆಕ್ನಿಕ್, ಬೀಳಗಿ. | -- | CE, CS, EC, ME |
| 28. | 152 | ಸರ್ಕಾರಿ ಪಾಲಿಟೆಕ್ನಿಕ್, ಬಾಗಲಕೋಟೆ. | -- | CE, CS, EC, ME |
| 29. | 153 | ಸರ್ಕಾರಿ ಪಾಲಿಟೆಕ್ನಿಕ್, ಬೇಲೂರು. | -- | CE, CS, EC, ME |
| 30. | 154 | ಸರ್ಕಾರಿ ಪಾಲಿಟೆಕ್ನಿಕ್, ಹೊಳೆನರಸಿಪುರ. | -- | CE, CS, EC, ME |
| 31. | 156 | ಸರ್ಕಾರಿ ಪಾಲಿಟೆಕ್ನಿಕ್, ಮುಳಬಾಗಿಲು. | -- | CE, CS, EC, ME |
| 32. | 158 | ಸರ್ಕಾರಿ ಪಾಲಿಟೆಕ್ನಿಕ್, ನಾಗಮಂಗಲ. | -- | CE, CS, EC, ME, EV, AY |
| 33. | 159 | ಸರ್ಕಾರಿ ಪಾಲಿಟೆಕ್ನಿಕ್, ರಾಮನಗರ. | -- | CE, CS, EC, ME, GA, EV |
| 34. | 160 | ಸರ್ಕಾರಿ ಪಾಲಿಟೆಕ್ನಿಕ್, ಮಿರ್ಲೆ. | -- | CE, CS, EC, ME |
| 35. | 161 | ಸರ್ಕಾರಿ ಪಾಲಿಟೆಕ್ನಿಕ್, ಅಫಜಲಪೂರ | -- | CE, CS, EC, ME |
| 36. | 162 | ಸರ್ಕಾರಿ ಪಾಲಿಟೆಕ್ನಿಕ್, ಜೋಯಿಡ. | -- | CE, CS, EC, ME |
| 37. | 164 | ಸರ್ಕಾರಿ ಪಾಲಿಟೆಕ್ನಿಕ್, ಮುಧೋಳ | -- | CE, CS, EC, ME |
| 38. | 165 | ಸರ್ಕಾರಿ ಪಾಲಿಟೆಕ್ನಿಕ್, ಕಾರಟಗಿ. | -- | AT, CE, ME |
| 39. | 166 | ಸರ್ಕಾರಿ ಪಾಲಿಟೆಕ್ನಿಕ್, ಕಾಳಗಿ. | -- | AT, CE, EC, ME |
| 40. | 167 | ಸರ್ಕಾರಿ ಪಾಲಿಟೆಕ್ನಿಕ್, ಮಂಡಗೋಡ್ | --- | CE, CS, EC, ME |
| 41. | 168 | ಸರ್ಕಾರಿ ಪಾಲಿಟೆಕ್ನಿಕ್, ಹೊಸದುರ್ಗ. | -- | CE, CS, EC, ME |
| 42. | 169 | ಸರ್ಕಾರಿ ಪಾಲಿಟೆಕ್ನಿಕ್, ಕೆ.ಜಿ.ಎಫ್ | -- | AT, CE, CS, EC, ME |
| 43. | 173 | ಸರ್ಕಾರಿ ಪಾಲಿಟೆಕ್ನಿಕ್, ಹರಪನಹಳ್ಳಿ | -- | CE, CS, EC, ME |
| 44. | 172 | ಸರ್ಕಾರಿ ಪಾಲಿಟೆಕ್ನಿಕ್, ಕಂಪ್ಲಿ. | -- | CE, CS, EC, ME |
| 45. | 174 | ಸರ್ಕಾರಿ ಪಾಲಿಟೆಕ್ನಿಕ್, ಕೂಡ್ಲಿಗಿ. | -- | CE, EC, ME, CY |
| 46. | 175 | ಸರ್ಕಾರಿ ಪಾಲಿಟೆಕ್ನಿಕ್, ಇಮ್ಮಡಿಹಳ್ಳಿ, ಬೆಂಗಳೂರು | -- | CE, CS, EC, ME, GA |
| 47. | 176 | ಸರ್ಕಾರಿ ಪಾಲಿಟೆಕ್ನಿಕ್, ಝಳಕಿ. | -- | CE, CS, EC, ME |
| 48. | 177 | ಸರ್ಕಾರಿ ಪಾಲಿಟೆಕ್ನಿಕ್, ಸಿದ್ದಾಪುರ | -- | CE, CS, EC, ME |
| 49. | 178 | ಸರ್ಕಾರಿ ಪಾಲಿಟೆಕ್ನಿಕ್, ರಬಕವಿ ಬನಹಟ್ಟಿ. | -- | CE, CS, EC, ME, CT |
| 50. | 179 | ಸರ್ಕಾರಿ ಪಾಲಿಟೆಕ್ನಿಕ್, ಅಥಣಿ | -- | CE, CS, EC, ME |
| 51. | 180 | ಸರ್ಕಾರಿ ಪಾಲಿಟೆಕ್ನಿಕ್, ಸುರಪುರ. | -- | AT, CE, CS, EC, ME |
| 52. | 181 | ಸರ್ಕಾರಿ ಪಾಲಿಟೆಕ್ನಿಕ್, ಔರಾದ್. | -- | AE, AY, CE, ME |
| 53. | 182 | ಸರ್ಕಾರಿ ಪಾಲಿಟೆಕ್ನಿಕ್, ಹಿರಿಯೂರು | -- | CE, CS, EC, ME |
| 54. | 183 | ಸರ್ಕಾರಿ ಪಾಲಿಟೆಕ್ನಿಕ್, ಚನ್ನಸಂದ್ರ., ಬೆಂಗಳೂರು. | -- | CE, CS, EC, ME |
| 55. | 184 | ಸರ್ಕಾರಿ ಪಾಲಿಟೆಕ್ನಿಕ್, ದೇವದುರ್ಗ. | -- | CE, CS, EC, ME |

| (1) | (2) | (3) | (4) | (5) |
|---|---|---|---|---|
| 56. | 185 | ಶ್ರೀ ಚನ್ನಕೇಶವ ಸರ್ಕಾರಿ ಪಾಲಿಟೆಕ್ನಿಕ್, ಗುಡ್ಡದ ಚನ್ನಾಪುರ, ಬಂಕಾಪುರ. | -- | CE, CS, EC, ME, TX |
| 57. | 188 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹೊಳೆನರಸೀಪುರ | -- | CE, CP, CK, CS, EC, EE |
| 58. | 189 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮೊಸಳೆಹೊಸಳ್ಳಿ | -- | CE, CP, CK, CS, EC, EE |
| 59. | 190 | ಸರ್ಕಾರಿ ಪಾಲಿಟೆಕ್ನಿಕ್, ಬಸವನಬಾಗೇವಾಡಿ | -- | AT, FP |
| 60. | 191 | ಸರ್ಕಾರಿ ಪಾಲಿಟೆಕ್ನಿಕ್, ಗೌರಿಬಿದನೂರು | -- | AT, AY |
| 61. | 192 | ಸರ್ಕಾರಿ ಪಾಲಿಟೆಕ್ನಿಕ್, ಕಾಪು, ಉಡುಪಿ ಜಿಲ್ಲೆ | -- | CT, AO |
| 62. | 193 | ಸರ್ಕಾರಿ ಪಾಲಿಟೆಕ್ನಿಕ್, ಚನ್ನಗಿರಿ, ದಾವಣಗೆರೆ ಜಿಲ್ಲೆ | -- | AT, AY |
| 63. | 194 | ಸರ್ಕಾರಿ ಪಾಲಿಟೆಕ್ನಿಕ್, ಹೊನ್ನಾಳಿ, ದಾವಣಗೆರೆ ಜಿಲ್ಲೆ | -- | AT, AY |
| 64. | 195 | ಸರ್ಕಾರಿ ಪಾಲಿಟೆಕ್ನಿಕ್, ಕೊಪ್ಪ, ಚಿಕ್ಕಮಗಳೂರು ಜಿಲ್ಲೆ | -- | FP, TT |
| 65. | 196 | ಸರ್ಕಾರಿ ಪಾಲಿಟೆಕ್ನಿಕ್, ತಾರಿಹಾಳ, ಹುಬ್ಬಳ್ಳಿ, | -- | CE, CS, EC, EI |
| 66. | 197 | ಸರ್ಕಾರಿ ಪಾಲಿಟೆಕ್ನಿಕ್, ಕಡೂರು, ಚಿಕ್ಕಮಗಳೂರು ಜಿಲ್ಲೆ | -- | EC, CS |
| 67. | 198 | ಸರ್ಕಾರಿ ಪಾಲಿಟೆಕ್ನಿಕ್, ಹಾರೋಹಳ್ಳಿ, ರಾಮನಗರ ಜಿಲ್ಲೆ | -- | EC CS |
| 68. | 199 | ಸರ್ಕಾರಿ ಪಾಲಿಟೆಕ್ನಿಕ್, ಸದಲಗ, ಬೆಳಗಾವಿ ಜಿಲ್ಲೆ | -- | CE, CS |
| 69. | 705 | ಸರ್ಕಾರಿ ಪಾಲಿಟೆಕ್ನಿಕ್, ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ | -- | EC, CS |
| 70. | 706 | ಸರ್ಕಾರಿ ಪಾಲಿಟೆಕ್ನಿಕ್, ಹಳಿಯಾಳ, ಉತ್ತರ ಕನ್ನಡ ಜಿಲ್ಲೆ | -- | AY, CS |
| 71. | 707 | ಸರ್ಕಾರಿ ಪಾಲಿಟೆಕ್ನಿಕ್, ಗುನ್ನಾಳ, ಕೊಪ್ಪಳ ಜಿಲ್ಲೆ | -- | AY, CS |
| 72. | 708 | ಸರ್ಕಾರಿ ಪಾಲಿಟೆಕ್ನಿಕ್, ಹೂವಿನಹಡಗಲಿ, ವಿಜಯನಗರ ಜಿಲ್ಲೆ | -- | CS, EC |
| 73. | 709 | ಸರ್ಕಾರಿ ಪಾಲಿಟೆಕ್ನಿಕ್, ಚಿತ್ರಳ್ಳಿ, ಹೊಳಲ್ಕೆರೆ ತಾ॥ | -- | CS, EV |
| | | ಖಾಸಗಿ ಅನುದಾನಿತ ಪಾಲಿಟೆಕ್ನಿಕ್‌ಗಳು | | |
| (1) | (2) | (3) | (4) | (5) |
| 1. | 203 | ಎ.ಪಿ.ಎಸ್. ಪಾಲಿಟೆಕ್ನಿಕ್, ಸೋಮನಹಳ್ಳಿ, ಬೆಂಗಳೂರು. | -- | CE, CS, EC, EE, ME |
| 2. | 205 | ಬಿ.ವಿ.ವಿ.ಎಸ್ ಪಾಲಿಟೆಕ್ನಿಕ್, ಬಾಗಲಕೋಟೆ. | -- | AT, CE, CP, CS, EC, EE, ME |
| 3. | 208 | ಜೆ.ಎಸ್.ಎಸ್. ಪಾಲಿಟೆಕ್ನಿಕ್ ಫಾರ್ ವುಮೆನ್ಸ್, ಮೈಸೂರು. | --- | AR, CP, CS, EC, EI, FT, ID |
| 4. | 301 | ಟಿಪ್ಪು ಶಾಹೀದ್ ಪಾಲಿಟೆಕ್ನಿಕ್, ಹುಬ್ಬಳ್ಳಿ, | -- | AT, CE, EC, ME |
| 5. | 302 | ಎಸ್.ಟಿ.ಜೆ ಪಾಲಿಟೆಕ್ನಿಕ್, ಹರಪ್ಪನಹಳ್ಳಿ, | -- | EE, ME |
| 6. | 303 | ಮರಾಠ ಮಂಡಳ ಪಾಲಿಟೆಕ್ನಿಕ್, ಬೆಳಗಾಂ. | -- | AT, CE, EC, EE, ME |
| 7. | 304 | ಆರ್.ಟಿ.ಇ.ಸೊಸೈಟಿ ರೂರಲ್ ಪಾಲಿಟೆಕ್ನಿಕ್, ಹುಲ್ಕೋಟಿ | -- | EC, ME, TX |
| 8. | 306 | ಹೆಚ್.ಎಂ.ಎಸ್. ಪಾಲಿಟೆಕ್ನಿಕ್, ತುಮಕೂರು | --- | AT, CE, CS, EC, EE, ME |
| 9. | 308 | ಸಂಜಯ್ ಮೆಮೋರಿಯಲ್ ಪಾಲಿಟೆಕ್ನಿಕ್, ಸಾಗರ. | -- | CE, CS, EC, ME |
| 10. | 309 | ಎನ್.ಆರ್.ಎ.ಎಂ. ಪಾಲಿಟೆಕ್ನಿಕ್, ನಿಟ್ಟೆ. | -- | CE, CS, EC, EE, ME |
| 11. | 310 | ಶ್ರೀ ಮಾಣಿಕ್‌ರಾವ್ ಪಾಟೀಲ್ ರೂರಲ್ ಪಾಲಿಟೆಕ್ನಿಕ್, ಠಾಣಕುಶನೂರು, ಬೀದರ್ ಜಿಲ್ಲೆ (ಜೆ.ಫನ್. ಪಾಲಿಟೆಕ್ನಿಕ್) | -- | CE, EE, EC, ME |
| 12. | 311 | ಎಂ.ವಿ.ಪಿ ರೂರಲ್ ಪಾಲಿಟೆಕ್ನಿಕ್, ಹಂಸಭಾವಿ. | -- | AT, EE, ME |
| 13. | 312 | ಗೊಮಟೇಶ್ ಪಾಲಿಟೆಕ್ನಿಕ್, ಹಿಂದುವಾಡಿ, ಬೆಳಗಾಂ. | --- | AT, CE, EC, EE, ME |
| 14. | 315 | ಮೋತಿ ಚಂದ್ ಲೆಂಗಡೆ ಭರತೇಶ್ ಪಾಲಿಟೆಕ್ನಿಕ್, ಬೆಳಗಾಂ. | -- | AT, ME |

| | | | | |
|---|---|---|---|---|
| 15. | 316 | ಟಿ.ಎಂ.ಎ.ಇ. ಸೊಸೈಟಿ ಪಾಲಿಟೆಕ್ನಿಕ್, ಹೊಸಪೇಟೆ. | -- | AT, CE, EC, EE, ME |
| 16. | 319 | ಸಿ.ವಿ. ಚರಂತಿಮಠ ಗ್ರಾಮೀಣ ಪಾಲಿಟೆಕ್ನಿಕ್, ಹುನಗುಂದ. | -- | CE, ME |
| 17. | 320 | ಬಿ.ವಿ.ವಿ.ಎಸ್ ಎಸ್.ಆರ್ ವಸ್ತ್ರದ್ ಗ್ರಾಮೀಣ ಪಾಲಿಟೆಕ್ನಿಕ್, ಗುಳೇದಗುಡ್ಡ | -- | EC, TX |
| 18. | 321 | ಎಸ್.ಜೆ.ಎಂ ಪಾಲಿಟೆಕ್ನಿಕ್, ಚಿತ್ರದುರ್ಗ. | --- | AT, CE, EC, ME |
| 19. | 323 | ನೂತನ ವಿದ್ಯಾಲಯ ಪಾಲಿಟೆಕ್ನಿಕ್, ಕಲಬುರ್ಗಿ | -- | EC |
| 20. | 324 | ಜೆ.ಎಸ್.ಎಸ್. ಪಾಲಿಟೆಕ್ನಿಕ್, ನಂಜನಗೂಡು. | -- | CE, EP, MP |
| 21. | 325 | ಡಿ.ಬನುಮಯ್ಯ ಪಾಲಿಟೆಕ್ನಿಕ್, ಮೈಸೂರು. | -- | CS, EC |
| 22. | 327 | ಆರ್.ಎನ್.ಶೆಟ್ಟಿ ಪಾಲಿಟೆಕ್ನಿಕ್, ಶಿರಸಿ. | -- | CE, EE |
| 23. | 330 | ಇಂಪ್ಯಾಕ್ಟ್ ಪಾಲಿಟೆಕ್ನಿಕ್, ಕೊಡಿಗೇಹಳ್ಳಿ, ಬೆಂಗಳೂರು | --- | AR, AT, EC, EE, ME |
| 24. | 331 | ಅಲ್–ಖತೀಬ್ ಪಾಲಿಟೆಕ್ನಿಕ್, ಭೂಪಸಂದ್ರ, ಬೆಂಗಳೂರು | -- | CE, CS, EC |
| 25. | 332 | ಕೆ.ವಿ.ಟಿ ಪಾಲಿಟೆಕ್ನಿಕ್, ಚಿಕ್ಕಬಳ್ಳಾಪುರ. | -- | AT, CS, EC, ME |
| 26. | 333 | ಅಂಜುಮನ್–ಎ–ಇಸ್ಲಾಂ ಪಾಲಿಟೆಕ್ನಿಕ್, ಗದಗ. | -- | EC, EE, PH |
| 27. | 335 | ಬಾಪೂಜಿ ಪಾಲಿಟೆಕ್ನಿಕ್, ಶಾಬನೂರು, ದಾವಣಗೆರೆ. | -- | CE, EC, ME |
| 28. | 337 | ಎಸ್.ಎನ್. ಮೂಡಬಿದ್ರೆ ಪಾಲಿಟೆಕ್ನಿಕ್, ಮೂಡಬಿದ್ರೆ | --- | AT, EC, EE |
| 29. | 338 | ಕೆ.ವಿ.ಜಿ ಪಾಲಿಟೆಕ್ನಿಕ್, ಸುಳ್ಯ | -- | AT, CE, EC, EE, ME |
| 30. | 340 | ಶ್ರೀ.ನಿರಂಜನ ಸ್ವಾಮಿ ಪಾಲಿಟೆಕ್ನಿಕ್, ಸುಂಕದಕಟ್ಟೆ. | -- | AT, CE, EC |
| 31. | 346 | ಡಿ.ವಿ.ಎಸ್ ಪಾಲಿಟೆಕ್ನಿಕ್, ಶಿವಮೊಗ್ಗ. | -- | CE, CS, EC |
| 32. | 351 | ಡಾ॥ ಜೆ.ಎಸ್ ಮೇಲ್ಕೋಟೆ ಗ್ರಾಮೀಣ ಪಾಲಿಟೆಕ್ನಿಕ್, ಕುಕ್ಕನೂರು, ಯಲಬುರ್ಗಾ ತಾ॥ | -- | CE, EC |
| 33. | 353 | ಎಸ್.ಜೆ.ಎಂ. ವಿದ್ಯಾಪೀಠ ಪಾಲಿಟೆಕ್ನಿಕ್, ಬೀರೂರು | --- | EC |
| 34. | 363 | ಸಿರಗುಪ್ಪ ಎಜುಕೇಷನ್ ಸೊಸೈಟಿ ಪಾಲಿಟೆಕ್ನಿಕ್, ಸಿರಗುಪ್ಪ | -- | CE, EE, ME |
| 35. | 364 | ಶ್ರೀ.ವೆಂಕಟೇಶ್ವರ ಪಾಲಿಟೆಕ್ನಿಕ್, ಬನ್ನೇರುಘಟ್ಟ, ಬೆಂಗಳೂರು | -- | AT, CS, EC, ME |
| 36. | 370 | ಶ್ರೀ.ವಿದ್ಯಾಧಿರಾಜ ಪಾಲಿಟೆಕ್ನಿಕ್, ಕುಮುಟಾ | -- | CE, EC, ME |
| 37. | 371 | ಸಹ್ಯಾದ್ರಿ ಪಾಲಿಟೆಕ್ನಿಕ್, ತೀರ್ಥಹಳ್ಳಿ. | -- | CE, EE, ME |
| 38. | 433 | ಪಿ.ವಿ.ಪಿ ಪಾಲಿಟೆಕ್ನಿಕ್, ಮಲ್ಲತ್ತಹಳ್ಳಿ, ಬೆಂಗಳೂರು | -- | AT, CE, CS, EC, EE, EI, IS, ME |

3. <u>ಎಸ್‌ಎನ್‌ಕ್ಯೂ ಮತ್ತು ವಿಶೇಷ ಗುಂಪಿನ ಸೀಟುಗಳ ಹಂಚಿಕೆ:</u>

ಸರ್ಕಾರದ ಆದೇಶ ಸಂ. ಇಡಿ 155 ಟಿಇಸಿ 2011, ದಿ:08–07–2011 ಮತ್ತು ಸರ್ಕಾರದ ಆದೇಶ ಸಂ. ಇಡಿ 10 ಟಿಇಸಿ 2019, ದಿ:30–05–2019ರ ಅನ್ವಯ ರಾಜ್ಯದ ಬಡ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿ ಕೋರ್ಸಿನಲ್ಲಿ ಒಟ್ಟು ಇಂಟೇಕ್‌ಗೆ ಹೆಚ್ಚುವರಿಯಾಗಿ ಶೇ.5ರಷ್ಟು ಸಂಖ್ಯಾಧಿಕ ಸೀಟುಗಳನ್ನು (Supernumerary Quota Seats) ಆದಾಯ ಮಿತಿಯನ್ನು ಆದರಿಸಿ. ಮೆರಿಟ್ ಮೇಲೆ ಬೋಧನಾ ಶುಲ್ಕ ವಿನಾಯಿತಿ ಯೋಜನೆಯಡಿ ಸೀಟು ಹಂಚಿಕೆ ಮಾಡುವುದು.

ಮುಂದುವರೆದು, ಸರ್ಕಾರದ ಆದೇಶ ಸಂ. ಇಡಿ 314 ಟಿಪಿಇ 98, ದಿ:20–07–1999ರ ನಿಯಮ 5(2)ರಲ್ಲಿ ಕಾಯ್ದಿರಿಸಲಾಗಿರುವ ವಿಶೇಷ ಗುಂಪಿನಡಿ ಬರುವ ಸೀಟುಗಳನ್ನು ಸಹ ನಿಯಮಾನುಸಾರ ಮೆರಿಟ್ ಆಧಾರದ ಮೇಲೆ ಸೀಟು ಹಂಚಿಕೆ ಮಾಡುವುದು.

4. **ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಕೋರ್ಸ್‌ಗಳ ಪ್ರವೇಶಕ್ಕೆ ಇರಬೇಕಾದ ಕನಿಷ್ಠ ಶಿಕ್ಷಣಾರ್ಹತೆಗಳು:**

| | |
|---|---|
| ಅ) ಇಂಜಿನಿಯರಿಂಗ್ ಕೋರ್ಸುಗಳಿಗೆ; | ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕರ್ನಾಟಕ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಒಟ್ಟಾರೆ ಶೇ. 35 ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು. |
| ಆ)ನಾನ್-ಇಂಜಿನಿಯರಿಂಗ್ ಕೋರ್ಸುಗಳಿಗೆ; ಕಮರ್ಷಿಯಲ್ ಪ್ರಾಕ್ಟೀಸ್ (ಕನ್ನಡ ಮತ್ತು ಆಂಗ್ಲ), ಲೈಬ್ರರಿ ಸೈನ್ಸ್ ಹಾಗೂ ಅಪೆರಲ್ ಡಿಸೈನ್ ಮತ್ತು ಫ್ಯಾಬ್ರಿಕೇಷನ್ ಟೆಕ್ನಾಲಜಿ(ಎಡಿಎಫ್‌ಟಿ) | |

5. **ಪ್ರವೇಶಕ್ಕೆ ಇರಬೇಕಾದ ಇತರೇ ಅರ್ಹತೆಗಳು:**

ಅಭ್ಯರ್ಥಿಯು ಭಾರತದ ಪ್ರಜೆಯಾಗಿರಬೇಕು ಹಾಗೂ ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಕರ್ನಾಟಕದಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯನ್ನೊಳಗೊಂಡು ಕನಿಷ್ಠ ಐದು ವರ್ಷಗಳವರೆಗೆ ವ್ಯಾಸಂಗ ಮಾಡಿರಬೇಕು. ಆದಾಗ್ಯೂ 05 ವರ್ಷಗಳ ವ್ಯಾಸಂಗದ ಷರತ್ತಿನಿಂದ ಕೆಲವು ಗುಂಪಿನ ಅಭ್ಯರ್ಥಿಗಳಿಗೆ ವಿನಾಯಿತಿ ನೀಡಲಾಗಿದೆ. ಈ ಬಗ್ಗೆ ಅಂತರ್ಜಾಲದಲ್ಲಿ ಪ್ರಕಟಿಸಿರುವ ಇ-ಮಾಹಿತಿ ಪುಸ್ತಕದಲ್ಲಿ ನೀಡಲಾಗಿರುವ ಸೂಚನೆಗಳನ್ನು ಓದುವುದು ಅಥವಾ ಸಂಬಂಧಿಸಿದ ಪಾಲಿಟೆಕ್ನಿಕ್ ಪ್ರಾಂಶುಪಾಲರಿಂದ ಮಾಹಿತಿ ಪಡೆಯುವುದು.

6. **ಅರ್ಜಿ ಹಾಗೂ ದಾಖಲಾತಿಗಳನ್ನು ಸಲ್ಲಿಸುವ ವಿಧಾನ:**

ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಇಂಜಿನಿಯರಿಂಗ್ ಹಾಗೂ ನಾನ್-ಇಂಜಿನಿಯರಿಂಗ್ ಕೋರ್ಸುಗಳಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ತಾಂತ್ರಿಕ ಶಿಕ್ಷಣ ಇಲಾಖೆಯ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧೀಕೃತ ವೆಬ್‌ಸೈಟ್ **dtetech.karnataka.gov.in/kartechnical or dtek.karnataka.gov.in or www.cetonline.karnataka.gov.in/kea/**ಗಳಲ್ಲಿರುವ ಅರ್ಜಿ, ಆದ್ಯತಾ ಪಟ್ಟಿ (Priority sheet) ಮತ್ತು ಇ-ಮಾಹಿತಿ ಪುಸ್ತಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ-ಮಾಹಿತಿ ಪುಸ್ತಕದಲ್ಲಿರುವ ಸೂಚನೆಗಳನ್ನು ಮನದಟ್ಟು ಮಾಡಿಕೊಂಡ ನಂತರ ಭರ್ತಿ ಮಾಡಿದ ಅರ್ಜಿಯನ್ನು ಮೆರಿಟ್ ಆಧಾರಿತ ಪಾಲಿಟೆಕ್ನಿಕ್‌ಗಳಲ್ಲಿ ಪ್ರವೇಶ ಬಯಸುವ ಅಭ್ಯರ್ಥಿಯು ಸಮೀಪದ ಯಾವುದೇ ಸರ್ಕಾರಿ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರಿಗೆ ಸಲ್ಲಿಸಿ, ಅರ್ಜಿ ಸಲ್ಲಿಸಿರುವುದಕ್ಕೆ ಸ್ವೀಕೃತಿಯನ್ನು ಪಡೆಯತಕ್ಕದ್ದು ಹಾಗೂ ಮೊದಲು ಬಂದವರಿಗೆ ಮೊದಲ ಆದ್ಯತೆ ಕೋರ್ಸುಗಳಲ್ಲಿ ಪ್ರವೇಶ ಬಯಸುವ ಅಭ್ಯರ್ಥಿಯು ಆಯಾ ಸರ್ಕಾರಿ ಅಥವಾ ಅನುದಾನಿತ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರಿಗೆ ಸಲ್ಲಿಸಿ ಅಂದೇ ಪ್ರವೇಶಾತಿ ಪಡೆಯುವುದು. (ಪಾಲಿಟೆಕ್ನಿಕ್ ಕಾಲೇಜುಗಳ ವಿವರಗಳ ಹಾಗೂ ಕೋರ್ಸುಗಳ ವಿವರವನ್ನು ಇ-ಮಾಹಿತಿ ಪುಸ್ತಕದಲ್ಲಿಯೂ ಸಹ ನೀಡಲಾಗಿದೆ).

ಅಭ್ಯರ್ಥಿಗಳು ಅರ್ಜಿಯೊಂದಿಗೆ ಸಂಬಂಧಪಟ್ಟ ಈ ಕೆಳಕಂಡ ಮೂಲ ದಾಖಲಾತಿಗಳನ್ನು ಕಡ್ಡಾಯವಾಗಿ ಹಾಜರುಪಡಿಸುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ. ಇಲ್ಲದಿದ್ದ ಪಕ್ಷದಲ್ಲಿ ವಿದ್ಯಾರ್ಥಿಯ ಶೈಕ್ಷಣಿಕ ಹಿತದೃಷ್ಟಿಯಿಂದ ವಿದ್ಯಾರ್ಥಿ/ನಿಯರು ಅಗತ್ಯ ದಾಖಲಾತಿಗಳನ್ನು ಪ್ರವೇಶಾನುಮೋದನೆಯ ದಿನಾಂಕದ ಒಳಗಾಗಿ ಸಲ್ಲಿಸುವ ಬಗ್ಗೆ ಮುಚ್ಚಳಿಕೆ ಪತ್ರವನ್ನು ನೀಡಿ ಪ್ರವೇಶ ಪಡೆಯುವುದು. ನಂತರ ಪ್ರವೇಶಾನುಮೋದನೆಯ ಸಮಯದಲ್ಲಿ ವಿವಿಧ ಪ್ರವರ್ಗಗಳಡಿ ಸೀಟು ಪಡೆದ ಅಭ್ಯರ್ಥಿಗಳು ಸಂಬಂಧಿಸಿದ ದಾಖಲಾತಿಗಳನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು. ತಪ್ಪಿದ್ದಲ್ಲಿ, ಅಂತಹ ವಿದ್ಯಾರ್ಥಿಗಳ ಪ್ರವೇಶವನ್ನು ಯಾವುದೇ ಮುನ್ಸೂಚನೆ ಇಲ್ಲದೆ ರದ್ದುಪಡಿಸಲಾಗುವುದು.

- ಎಸ್.ಎಸ್.ಎಲ್.ಸಿ ಅಂಕಪಟ್ಟಿ ಅಥವಾ ಮುಖ್ಯೋಪಾಧ್ಯಾಯರಿಂದ ಧೃಡಿಕರಿಸಲ್ಪಟ್ಟ Statement of Marks ಅಥವಾ ಅಂತರ್ಜಾಲದಿಂದ ಪಡೆದಿರುವ ಮುದ್ರಿತ ಅಂಕಪಟ್ಟಿಯ ಧೃಡೀಕೃತ ಪ್ರತಿ.
- ವರ್ಗಾವಣೆ ಪ್ರಮಾಣ ಪತ್ರ(TC) / ಆಕ್ಷೇಪಣಾ ರಹಿತ ಪ್ರಮಾಣ ಪತ್ರ (NOC)
- ಜಾತಿ ಮತ್ತು ಆದಾಯ ವರಮಾನ ಪ್ರಮಾಣ ಪತ್ರ, ಅಥವಾ ಪ್ರಮಾಣ ಪತ್ರಕ್ಕಾಗಿ ನಾಡಕಚೇರಿಗೆ ಅರ್ಜಿ ಸಲ್ಲಿಸಿದ್ದಲ್ಲಿ, ಪಡೆದ ಸ್ವೀಕೃತಿಯ ಪ್ರತಿಯನ್ನು ಸಲ್ಲಿಸುವುದು.

- ಕನ್ನಡ ಮಾಧ್ಯಮ/ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರ (ಅನ್ವಯಿಸಿದ್ದಲ್ಲಿ ಮಾತ್ರ)
- ಹೈದ್ರಾಬಾದ್ – ಕರ್ನಾಟಕ ಮೀಸಲಾತಿ ಪ್ರಮಾಣ ಪತ್ರ ಅಥವಾ ಪ್ರಮಾಣ ಪತ್ರಕ್ಕಾಗಿ ನಾಡಕಚೇರಿಗೆ ಅರ್ಜಿ ಸಲ್ಲಿಸಿದ್ದಲ್ಲಿ, ಪಡೆದ ಸ್ವೀಕೃತಿಯ ಪ್ರತಿಯನ್ನು ಸಲ್ಲಿಸುವುದು (ಅನ್ವಯಿಸಿದ್ದಲ್ಲಿ ಮಾತ್ರ).
- ವಿಶೇಷ ಗುಂಪಿನ ಮೀಸಲಾತಿ (**Special Category Quota**) ಕೋಟಾದ ಪ್ರಮಾಣ ಪತ್ರ {ಇ–ಮಾಹಿತಿ ಪುಸ್ತಕದಲ್ಲಿರುವ ವಿಶೇಷ ಗುಂಪಿನ ಮೀಸಲಾತಿ ಪ್ರಮಾಣ ಪತ್ರ (ಅನ್ವಯಿಸಿದ್ದಲ್ಲಿ, ಅರ್ಜಿ ಸಲ್ಲಿಸುವ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸುವುದು)}.

7. ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದ ಅರ್ಜಿ ಮತ್ತು ಪ್ರವೇಶ ಶುಲ್ಕ:

ಅರ್ಜಿ ಶುಲ್ಕ:

ಅಭ್ಯರ್ಥಿಗಳು ಸೀಟು ಆಯ್ಕೆ ಮಾಡಿಕೊಂಡ ಪಾಲಿಟೆಕ್ನಿಕ್‌ನಲ್ಲಿ ನಿಗಧಿತ ಪ್ರವೇಶ ಶುಲ್ಕದೊಂದಿಗೆ ಅರ್ಜಿ ಶುಲ್ಕವನ್ನು (ಸಾಮಾನ್ಯ ವರ್ಗ/2ಎ/2ಬಿ/3ಎ/3ಬಿ ರೂ.100/– ಮತ್ತು ಪ.ಜಾ/ಪ.ಪಂ/ಪ್ರವರ್ಗ–1 ರೂ.50) ನಗದು ರೂಪದಲ್ಲಿ ಕಡ್ಡಾಯವಾಗಿ ಪಾವತಿಸುವುದು.

ಪ್ರವೇಶ ಶುಲ್ಕ:

ಉಲ್ಲೇಖ(3)ರಲ್ಲಿನ ಸರ್ಕಾರಿ ಆದೇಶದನ್ವಯ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಪಾಲಿಟೆಕ್ನಿಕ್‌ಗಳಿಗೆ ಅನ್ವಯವಾಗುವಂತೆ ಕೆಳಕಂಡ ಪ್ರವೇಶ ಶುಲ್ಕವನ್ನು ನಿಗದಿಪಡಿಸಲಾಗಿದೆ.

| ಕ್ರ. ಸಂ. | ಪಾಲಿಟೆಕ್ನಿಕ್ | ಬೋಧನಾ ಶುಲ್ಕ | ಅಭಿವೃದ್ಧಿ ಶುಲ್ಕ | ಇತರೆ ಶುಲ್ಕ | ಒಟ್ಟು |
|---|---|---|---|---|---|
| 1. | ಸರ್ಕಾರಿ ಪಾಲಿಟೆಕ್ನಿಕ್ | ರೂ.2,940/– | ರೂ. 500/– | ರೂ. 830/– | **ರೂ. 4,270/–** |
| 2. | ಅನುದಾನಿತ ಪಾಲಿಟೆಕ್ನಿಕ್ | ರೂ. 5,618/– | ರೂ. 500/– | ರೂ. 830/– | **ರೂ. 6,948/–** |

**ಆದಾಗ್ಯೂ ವಿವಿಧ ಪ್ರವರ್ಗಗಳ ಮೀಸಲಾತಿಯಡಿ ಸೀಟು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಪ್ರವೇಶಾತಿ ಸಮಯದಲ್ಲಿ ಸರ್ಕಾರದ ಆದೇಶಗಳ ಪ್ರಕಾರ ವಿನಾಯಿತಿ ಪಡೆದು ಪಾವತಿಸಬೇಕಾದ ಶುಲ್ಕಗಳ ವಿವರ:**

| ಕ್ರ. ಸಂ. | ವರ್ಗ | ಪೋಷಕರ ವಾರ್ಷಿಕ ಆದಾಯ ಮಿತಿ | ಸರ್ಕಾರಿ ಪಾಲಿಟೆಕ್ನಿಕ್ ಕೋರ್ಸುಗಳಿಗೆ | ಅನುದಾನಿತ ಪಾಲಿಟೆಕ್ನಿಕ್ (ಅನುದಾನಿತ ಕೋರ್ಸುಗಳಿಗೆ) |
|---|---|---|---|---|
| (1) | (2) | (3) | (4) | (5) |
| 01. | ಸಾಮಾನ್ಯ | --- | ರೂ. 4,270/– | ರೂ. 6,948/– |
| 02. | ಪ. ಜಾತಿ ಮತ್ತು ಪ.ಪಂಗಡ | ರೂ. 2.50ಲಕ್ಷದವರೆಗೆ | ರೂ. 430/– | ರೂ. 430/– |
| 03. | ಪ. ಜಾತಿ ಮತ್ತು ಪ.ಪಂಗಡ | ರೂ. 2.50 ದಿಂದ ರೂ. 10.00 ಲಕ್ಷದವರೆಗೆ | ರೂ. 2,535/– | ರೂ. 3,874/– |
| 04. | ಪ್ರವರ್ಗ–1 [ನಧಾಫ್, ಪಿಂಜಾರ, ದರವೇಶ್, ಚಪ್ಪರಬಂದ್, ಕಸಾಬ, ಪೂಲ್‌ಮಾಲಿ (ಮುಸ್ಲಿಂ) ಹೊರತುಪಡಿಸಿ] | ರೂ. 2.50 ಲಕ್ಷದವರೆಗೆ | ರೂ. 960/– | ರೂ. 3,638/– |
| 05. | 2ಎ/3ಎ/3ಬಿ (ಅಲ್ಪಸಂಖ್ಯಾತ ಸಮುದಾಯಗಳನ್ನು ಹೊರತುಪಡಿಸಿ) | ರೂ. 1.00 ಲಕ್ಷದವರೆಗೆ | ರೂ. 960/– | ರೂ. 3,638/– |
| 06. | 2ಬಿ ಮುಸ್ಲಿಂ ಸಮುದಾಯ ಹಾಗೂ ಪ್ರವರ್ಗ–1ರಲ್ಲಿ ಬರುವ ನಧಾಫ್, ಪಿಂಜಾರ, ದರವೇಶ್, ಚಪ್ಪರಬಂದ್, ಕಸಾಬ, ಪೂಲ್‌ಮಾಲಿ(ಮುಸ್ಲಿಂ) ಪ್ರವರ್ಗ2ಎ–ಭೌದ್ದ ಸಮುದಾಯ, | --- | ರೂ. 4,270/– | ರೂ. 6,948/– |

| | | | | |
|---|---|---|---|---|
| | ಪ್ರವರ್ಗ3ಬಿ–ಕ್ರಿಶ್ಚಿಯನ್, ಜೈನ್, ಪಾರ್ಸಿ, ಸಿಖ್ ಸಮುದಾಯ (ಹಿಂದುಳಿದ ವರ್ಗ ಹೊರತುಪಡಿಸಿ) | | | |
| 07. | ಎಸ್.ಎನ್.ಕ್ಯೂ (SNQ) | ರೂ. 1.00 ಲಕ್ಷದಿಂದ ರೂ. 8.00 ಲಕ್ಷದವರೆಗೆ | ರೂ. 1,330/– | ರೂ. 1,330/– |

- ❖ ಪ್ರತಿ ಸಂಸ್ಥೆಯು ಕನಿಷ್ಠ ಒಂದಾದರೂ (ಇಲಾಖೆಯಿಂದ ಎನ್.ಎಸ್.ಎಸ್ ಅನುದಾನ ಪಡೆಯುವ ಘಟಕವಾಗಲೀ/ಸ್ವ–ಆರ್ಥಿಕ ಘಟಕವಾಗಲೀ) ಘಟಕವನ್ನು ಖಡ್ಡಾಯವಾಗಿ ಹೊಂದಿರಬೇಕು.
- ❖ ಇಲಾಖೆಯಿಂದ ಎನ್.ಎಸ್.ಎಸ್ ಅನುದಾನ ಪಡೆಯುವ ಘಟಕವನ್ನು ಈಗಾಗಲೇ ಹೊಂದಿರುವ ಸಂಸ್ಥೆಗಳು ಸ್ವ–ಆರ್ಥಿಕ ಘಟಕವನ್ನು ಸಹ ಸ್ಥಾಪಿಸುವುದಿದ್ದರೇ ಮಾತ್ರ ಮೇಲ್ಕಂಡ ಶುಲ್ಕದ ಜೊತೆಗೆ ರೂ.40/–ನ್ನು ಎಲ್ಲಾ ವಿದ್ಯಾರ್ಥಿಗಳಿಂದ ಪ್ರವೇಶ ಸಮಯದಲ್ಲಿ ಪಾವತಿಸಿಕೊಳ್ಳತಕ್ಕದ್ದು.
- ❖ ಎನ್.ಎಸ್.ಎಸ್ ಘಟಕವನ್ನು ಈವರೆಗೂ ಹೊಂದಿಲ್ಲದ ಸಂಸ್ಥೆಗಳು ಸ್ವ–ಆರ್ಥಿಕ ಎನ್.ಎಸ್.ಎಸ್ ಘಟಕ ಸ್ಥಾಪಿಸಲು ಮೇಲ್ಕಂಡ ಶುಲ್ಕದ ಜೊತೆಗೆ ಈ ವರ್ಷಕ್ಕೆ ಮಾತ್ರ ರೂ.50/– ನ್ನು ಎಲ್ಲಾ ವಿದ್ಯಾರ್ಥಿಗಳಿಂದ ಪ್ರವೇಶ ಸಮಯದಲ್ಲಿ ಪಾವತಿಸಿಕೊಳ್ಳತಕ್ಕದು (ಮುಂದಿನ ವರ್ಷದಿಂದ ರೂ.40/–).

ಮೇಲ್ಕಂಡಂತೆ ಶುಲ್ಕ ವಿನಾಯಿತಿ/ಮರುಪಾವತಿ ಪಡೆಯಲು ಆಸಕ್ತರಿರುವ ಅಭ್ಯರ್ಥಿಗಳು ಪಾಲಿಸಬೇಕಾದ ನಿಯಮಗಳನ್ನು ಉಲ್ಲೇಖ(4)ರ ಈ ಕಛೇರಿ ಸುತ್ತೋಲೆಯಲ್ಲಿ ಸ್ಪಷ್ಟಪಡಿಸಲಾಗಿದ್ದು, ಅದರಂತೆ ವಿದ್ಯಾರ್ಥಿಗಳು ಪ್ರವೇಶ ಸಮಯದಲ್ಲಿ ನಿಗಧಿತ ಶುಲ್ಕವನ್ನು ಪಾವತಿಸಿ, ಸಂಬಂಧಪಟ್ಟ ಸರ್ಕಾರಿ ಇಲಾಖೆಗಳಿಂದ ನೀಡುವ ವಿದ್ಯಾರ್ಥಿವೇತನಕ್ಕಾಗಿ ಕಡ್ಡಾಯವಾಗಿ ಅರ್ಜಿ ಸಲ್ಲಿಸತಕ್ಕದ್ದು.

ವಿನಾಯಿತಿ ಪಡೆದ ಅರ್ಹ ಶುಲ್ಕಗಳ ಮರುಪಾವತಿಗೆ ಅಭ್ಯರ್ಥಿಗಳು State Scholarship Portal / National Scholarship Portal ವೆಬ್‌ಸೈಟ್‌ಗಳಲ್ಲಿ ಆನ್–ಲೈನ್ ಮುಖಾಂತರ ಕಡ್ಡಾಯವಾಗಿ ಅರ್ಜಿ ಸಲ್ಲಿಸಿ ಮರುಪಾವತಿ ಪಡೆಯುವುದು. ಶುಲ್ಕ ವಿನಾಯಿತಿ ಪಡೆದ ಅಭ್ಯರ್ಥಿಗಳು ಅರ್ಜಿ ಸಲ್ಲಿಸದೆ ಇದ್ದ ಪಕ್ಷದಲ್ಲಿ ವಿನಾಯಿತಿ ಪಡೆದ ಎಲ್ಲಾ ಶುಲ್ಕಗಳನ್ನು ಸಾಮಾನ್ಯ ವರ್ಗದ ಅಭ್ಯರ್ಥಿಗಳಂತೆ ಕಡ್ಡಾಯವಾಗಿ ಪಾವತಿ ಮಾಡತಕ್ಕದ್ದು.

ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದಂತೆ ಇರಬೇಕಾದ ಕನಿಷ್ಠ ವಿದ್ಯಾರ್ಹತೆ, ಪಾಲಿಟೆಕ್ನಿಕ್‌ಗಳು, ಕೋರ್ಸ್‌ಗಳು, ಮೀಸಲಾತಿ ವಿವರ, ವಿವಿಧ ವಿಶೇಷ ಗುಂಪಿನಡಿ (Special Category Quota) ಕಾಯ್ದಿರಿಸಲಾಗಿರುವ ಸ್ಥಾನಗಳ ವಿವರ ಹಾಗೂ ವಿವಿಧ ಪ್ರಮಾಣ ಪತ್ರಗಳ ನಮೂನೆಯನ್ನು ಇ–ಮಾಹಿತಿ ಮಸ್ತಕದಲ್ಲಿ ನೀಡಲಾಗಿದೆ. ಇ–ಮಾಹಿತಿ ಮಸ್ತಕದಲ್ಲಿ ನಮೂದಿಸಿರುವ ಸೂಚನೆಗಳನ್ನು ಸ್ಪಷ್ಟವಾಗಿ ಓದಿಕೊಂಡು ಅಭ್ಯರ್ಥಿಯು ಪ್ರವೇಶ ಬಯಸುವ ಸರ್ಕಾರಿ ಅಥವಾ ಅನುದಾನಿತ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರಿಗೆ ನಿಗಧಿಪಡಿಸಿರುವ ಅಂತಿಮ ದಿನಾಂಕದೊಳಗೆ ಅರ್ಜಿಗಳನ್ನು ಸಲ್ಲಿಸುವುದು.

ಪ್ರವೇಶಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಗಳಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧೀಕೃತ **dtek.karnataka.gov.in** or **dtetech.karnataka.gov.in/kartechnical** or **www.cetonline.karnataka.gov.in/kea/**ಗಳ ವೆಬ್ ಸೈಟ್‌ಗಳನ್ನು ಸಂಪರ್ಕಿಸಬಹುದಾಗಿರುತ್ತದೆ.

| |
|---|
| *ಟಿಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.* |

K. G— (signature)

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

ಗೆ,

*ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ* – ಮಾಹಿತಿಗಾಗಿ & ಮುಂದಿನ ಅಗತ್ಯ ಕ್ರಮಕ್ಕಾಗಿ ಹಾಗೂ ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರಕಟಿಸುವುದು ಮತ್ತು ಮೇಲೆ ನಮೂದಿಸಿರುವಂತೆ ಕೂಡಲೇ ಕ್ರಮ ತೆಗೆದುಕೊಂಡು ಈ ಬಗ್ಗೆ ಸ್ಥಳೀಯವಾಗಿ ಪತ್ರಿಕಾ ಪ್ರಕಟಣೆಯನ್ನು ನೀಡಿ, ಅಭ್ಯರ್ಥಿಗಳ ಮತ್ತು ಪೋಷಕರ ಗಮನಕ್ಕೆ ತರುವುದು.

<u>ಪ್ರತಿ ಮಾಹಿತಿಗಾಗಿ:-</u>

1) ಮಾನ್ಯ ಆಯುಕ್ತರ ಆಪ್ತಶಾಖೆಗೆ.
2) ಮಾನ್ಯ ನಿರ್ದೇಶಕರ ಆಪ್ತಶಾಖೆಗೆ.
3) ಇಲಾಖೆಯ ಎಲ್ಲಾ ಜಂಟಿ ನಿರ್ದೇಶಕರುಗಳಿಗೆ.
4) ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ,
5) ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು,
6) ಎಸ್‌ಟಿಎಲ್, ಡಿವಿಪಿ(1) ಮತ್ತು ಡಿವಿಪಿ(2) ವಿಭಾಗಕ್ಕೆ.
7) ಇ.ಆರ್.ಎಸ್ ವಿಭಾಗಕ್ಕೆ - ಸಿ.ಬಿ.ಎಸ್.ಇ, ಐ.ಸಿ.ಎಸ್.ಇ ಹಾಗೂ ಕರ್ನಾಟಕೇತರ ಅಭ್ಯರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರ ವಿತರಿಸುವ ಬಗ್ಗೆ ಇ-ಮಾಹಿತಿ ಪುಸ್ತಕದಲ್ಲಿ ತಿಳಿಸಿರುವಂತೆ ಕ್ರಮಜರುಗಿಸತಕ್ಕದ್ದು.
8) ಇ-ಆಡಳಿತ ವಿಭಾಗಕ್ಕೆ - ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
9) ಕಡತಕ್ಕೆ.